‘ಕೆಟ್ಟು ಪಟ್ಟಣ ಸೇರು’ ಎನ್ನುವ ಗಾದೆ ಈಗ ‘ಉಳಿವಿಗಾಗಿ ಊರು ಸೇರು’ ಎನ್ನುವಂತಾಗಿದೆ. ಬದುಕು ಹುಡುಕಿಕೊಂಡು ಪಟ್ಟಣ ಸೇರಿದವರು, ಬದುಕು ಉಳಿಸಿಕೊಳ್ಳಲಿಕ್ಕಾಗಿ ಊರ ದಾರಿ ಹಿಡಿದಿರುವ ವಿಚಿತ್ರ ಸಂದರ್ಭ ಇಂದಿನದು. ಕೊರೊನಾ ಸೋಂಕಿಗೆ ಅಂಜಿ ನಗರಗಳಿಗೆ ಬೆನ್ನುಹಾಕಿರುವ ಲಕ್ಷಾಂತರ ಜನ ಹಳ್ಳಿಗಳಿಗೆ ಬಂದಿದ್ದಾರೆ. ಊರಲ್ಲಿ ಅನ್ನ ಹುಟ್ಟುತ್ತಿಲ್ಲ ಎನ್ನುವ ಕಾರಣಕ್ಕಾಗಿಯೇ ನಗರಕ್ಕೆ ಹೋದವರು, ಈಗ ಮತ್ತೆ ತವರಿಗೆ ಬಂದರೆ ಅಲ್ಲಿ ಬದುಕುವುದಾದರೂ ಹೇಗೆ? ಹೀಗೆ ಬಂದವರಿಗೆ ಕೃಷಿ ದುಡಿಮೆಯ ಶಕ್ತಿ ಇದೆಯೇ? ಉಳಿದಿದೆಯೇ? ಹೈಟೆಕ್ ನಗರಗಳಿಂದ ಬಂದವರಿಗೆ, ಉತ್ತಮ ಶಾಲೆ, ರಸ್ತೆ, ಮೊಬೈಲ್ ನೆಟ್‌ವರ್ಕ್, ಯಾವುದೂ ಸರಿಯಿಲ್ಲದ ಹಳ್ಳಿಗಳು ಒಗ್ಗುತ್ತವೆಯೇ? ಕೊರೊನಾ ಕಾರಣದಿಂದಾಗಿ ರೂಪುಗೊಂಡಿರುವ ತಿರುಗುಮುರುಗಾದ ವಲಸೆಯ ವಿದ್ಯಮಾನದ ಈ ವಿಶ್ಲೇಷಣೆ – ಹಳ್ಳಿಗಳ ಬದಲಾದ ಸ್ವರೂಪ ಹಾಗೂ ಕೃಷಿ ಪರಿಸ್ಥಿತಿಯ ಸ್ಥಿತ್ಯಂತರಗಳ ಚಿತ್ರಣದೊಂದಿಗೆ, ನಗರಗಳಿಂದ ಹಳ್ಳಿಗಳಿಗೆ ಹೋದವರು ರೂಢಿಸಿಕೊಳ್ಳಬೇಕಾದ ಮನಸ್ಥಿತಿಯ ಬಗ್ಗೆಯೂ ಗಮನಸೆಳೆಯುತ್ತದೆ.

■ **ಶಿವಾನಂದ ಕಳವೆ**

## ಹಳೆಯ ನೆನಪು, ಹೊಸ ತವಕದೊಂದಿಗೆ ‘ಮರಳಿ ಗೂಡಿಗೆ’

# ಉಳಿವಿಗಾಗಿ ಊರು